**ಸಾಕ್ಷಿಯನ್ನು ದಿನಾಂಕಃ02.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಜಿ ಎನ್ ಎಸ್ ವಕೀಲರಿಂದಃ**

1. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಿಃ29.11.1979 ರ ವಿಭಾಗ ಪತ್ರ ಆಗಿರುವ ವಿಷಯ ನನಗೆ ನನ್ನ ಗಂಡ ಮೃತ ಪಡುವ 1 ವರ್ಷದ ಪೂರ್ವದಲ್ಲಿ ಗೊತ್ತಾಗಿರುತ್ತದೆ. ನನ್ನ ಗಂಡ ದಿಃ09.08.2019 ರಲ್ಲಿ ಮೃತ ಪಟ್ಟಿದ್ದಾರೆ. ಆ ರೀತಿ ಗೊತ್ತಾದಾಗ ನನಗೆ ಈ ದಾವೆ ಸಲ್ಲಿಸಲು ತೊಂದರೆ ಇತ್ತು. 1 ನೇ ಪ್ರತಿವಾದಿ ನನ್ನ ಗಂಡನಿಗೆ ನೊಂದಾಯಿತ ವಿಭಾಗ ಪತ್ರದಲ್ಲಿ ಬಂದಿರುವ ಸರ್ವೆ ನಂಬರ್ 358/2 ಆಸ್ತಿಯನ್ನು ಮತ್ತು ಮನೆಯನ್ನು ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರಿಂದ ಮತ್ತು ಆ ಬಗ್ಗೆ ತಹಶೀಲ್ದಾರ್ ರವರು ಹಿಂಬರಹ ಕೊಡಲು ನಾನು ಕಾಯುತ್ತಿದ್ದರಿಂದ ಈ ಕೇಸ್ ಹಾಕಲು ಆಗ ನನಗೆ ತೊಂದರೆ ಇತ್ತು. ಆ ವಿಷಯವನ್ನು ನಾನು ದಾವೆಯಲ್ಲಿ ಹೇಳಿದ್ದೇನೆ. ಸರ್ವೆ ನಂಬರ್ 358/2ರ ಆಸ್ತಿಯನ್ನು ಮಾತ್ರ ನನ್ನ ಹೆಸರಿಗೆ ಮಾಡಿಕೊಡಬೇಕೆಂದು ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟಿದ್ದೇನೆ ಎಂದರೆ ಸರಿ. ಆ ಅರ್ಜಿ ಆಧಾರದ ಮೇಲೆ ಖಾತೆ ಮಾಡಿಸಿಕೊಳ್ಳಬೇಕಾದರೆ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬೇಕೆಂದು ನನಗೆ ಹಿಂಬರಹ ಕೊಟ್ಟಿದ್ದರು ಎಂದರೆ ಸರಿ. ಆ ರೀತಿ ಹಿಂಬರಹ ಕೊಟ್ಟ ನಂತರ ನಾನು ನನ್ನ ಹೆಸರಿಗೆ ಖಾತೆ ಮಾಡಿಕೊಡಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕೇಸ್ ಹಾಕಿಲ್ಲ. ಆ ರೀತಿ ಕೇಸ್ ಹಾಕಲು ನನಗೆ ತೊಂದರೆ ಇರಲಿಲ್ಲ. ನಿಶಾನೆ ಪಿಃ4 ರ ಪ್ರಕಾರ ಸರ್ವೆ ನಂಬರ್ 434/6 ನನ್ನ ಮತ್ತು ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ಜಂಟಿ ಖಾತೆ

ಇದೆ ಎಂದರೆ ಸರಿ. ನಾನು ಖಾತೆ ಮಾಡಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಕೇಸು ಹಾಕಬೇಕಾಗಿತ್ತು, ಈ ದಾವೆ ಸಲ್ಲಿಸಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉದ್ಭವ ಆಗಿಲ್ಲದೇ ಇದ್ದರೂ ಪ್ರತಿವಾದಿಯರಿಗೆ ತೊಂದರೆ ಕೊಡಲು ವ್ಯಾಜ್ಯ ಕಾರಣ ಸೃಷ್ಠಿಸಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.